ದಿನಾಂಕ 02-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು:** ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ

6. ನಾನು ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕನಾಗಿ ಪ್ರಥಮವಾಗಿ ನೇಮಕಗೊಂಡಿರುತ್ತೇನೆ. 2005 ರಲ್ಲಿ ಪದೋನ್ನತಿಯಾಗಿ ವನಪಾಲಕ ಆಗಿ ನೇಮಕಗೊಂಡೆ. ವನಪಾಲಕ ಎಂಬ ಹುದ್ದೆಯನ್ನು ಮರುನಾಮಕರಣ ಮಾಡಿ ಉಪವಲಯ ಅರಣ್ಯಾಧಿಕಾರಿ ವ ಮೋಜಣಿದಾರ ಹುದ್ದೆಯನ್ನು 2010 ರಲ್ಲಿ ಮಾಡಿರಬಹುದು. ನಾನು ಕೋಟೆಬಾವಿಯಲ್ಲಿ ಕರ್ತವ್ಯದಲ್ಲಿದ್ದಾಗ ಉಪವಲಯ ಅರಣ್ಯಾಧಿಕಾರಿಯಾಗಿ ಕೆಲಸ ಮಾಡಿದ್ದೆ. ವನಪಾಲಕ ಹುದ್ದೆಯ ಅಧಿಕಾರ ವ್ಯಾಪ್ತಿಯೇ ಉಪವಲಯ ಅರಣ್ಯಾಧಿಕಾರಿ ವ್ಯಾಪ್ತಿಯಾಗಿರುತ್ತದೆ. ಪಿರ್ಯಾದಿ ಜಗದೀಶ್ ದೇವಾಡಿಗ ಕೂಡ ಉಪವಲಯ ಅರಣ್ಯಾಧಿಕಾರಿಯಾಗಿ ಬಾಳೆಗುಳಿಯಲ್ಲಿ ಕರ್ತವ್ಯದಲ್ಲಿದ್ದರು. ಉಪವಲಯ ಅರಣ್ಯಾಧಿಕಾರಿಗಿಂತ ಮೇಲಿನ ಹುದ್ದೆ ವಲಯ ಅರಣ್ಯಾಧಿಕಾರಿ. ಅರಣ್ಯ ರಕ್ಷಕನಿಗಿಂತ ಕೆಳ ಹುದ್ದೆ ಅರಣ್ಯ ವಿಕ್ಷಕ ಹುದ್ದೆ ಇರುತ್ತದೆ. ಕೋಟೆಬಾವಿ ಅರಣ್ಯ ಪ್ರದೇಶ ಅಂಕೋಲಾ ವಲಯ ಅರಣ್ಯ ಕಚೇರಿಯಿಂದ 18 ಕಿ.ಮಿ. ದೂರದಲ್ಲಿದೆ.

7. ದಿನಾಂಕ 14-08-2020 ರಂದು ನಾನು ಕೋಟೆಬಾವಿಯ ಉಪವಲಯ ಅರಣ್ಯಾಧಿಕಾರಿಯಾಗಿದ್ದರು ಕೂಡ ಅಂಕೋಲಾ ವಲಯ ಅರಣ್ಯ ಕಚೇರಿಯಲ್ಲಿದ್ದೆ. ಆ ದಿನ ಅಂಕೋಲಾ ವಲಯ ಕಚೇರಿಯಲ್ಲಿ ಇದ್ದ ಬಗ್ಗೆ ದಾಖಲೆ ವಲಯ ಅರಣ್ಯಾಧಿಕಾರಿಯಲ್ಲಿ ಇದೆ. ಆ ದಾಖಲೆ ಎಂದರೆ ದಿನಚರಿ ಡೈರಿಯಾಗಿರುತ್ತದೆ. ದಿನಚರಿ ಡೈರಿಯಲ್ಲಿ ಈ ಪ್ರಕರಣದಲ್ಲಿ ಭಾಗವಹಿಸಿದೆವು ಎನ್ನಲಾದ ಎಲ್ಲರ ನಮೂದು ಇರುತ್ತದೆ. ನವಗದ್ದೆ ಅರಣ್ಯ ಪ್ರದೇಶವನ್ನು ದಿನಾಂಕ 14-08-2020 ಕ್ಕಿಂತ ಹಿಂದೆ ನೋಡಿದ್ದೆ ಹಾಗೂ ಕರ್ತವ್ಯ ನಿರ್ವಹಿಸಿದ್ದೆ. ಈ ಪ್ರಕರಣಕ್ಕೆ

ಸಂಬಂಧಪಟ್ಟಂತೆ ನಾನು ಹೇಳಿಕೆ ಕೊಟ್ಟಿದ್ದೇನೆ. ಆ ಹೇಳಿಕೆಯನ್ನು ನಾನು ದಿನಾಂಕ 20-08-2020 ರಂದು ನೀಡಿರಬಹುದು. ಆ ಹೇಳಿಕೆಯನ್ನು ನಾನೇ ಹೇಳಿ ಬರೆಸಿರುವುದು. ನಾನು ಹೇಳಿಕೆಯನ್ನು ಕೊಟ್ಟಾಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಆ ಹೇಳಿಕೆಯಲ್ಲಿ ನಾನು ನನ್ನ ವಲಯ ಅರಣ್ಯಾಧಿಕಾರಿಗಳು ದೂರವಾಣಿ ಮುಖಾಂತರ ಮಾಹಿತಿ ನೀಡಿದ್ದರು ಎಂದು ಹೇಳಿದ್ದೇನೆ. ಆ ಸಮಯದಲ್ಲಿ ನಮ್ಮ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿದ್ದರು. ಸಾಕ್ಷಿಯು ಪುನಹ ಬಾಳೆಗುಳಿ ಉಪವಲಯ ಅರಣ್ಯಾಧಿಕಾರಿ ದೂರವಾಣೆ ಮುಖಾಂತರ ಮಾಹಿತಿ ನೀಡಿದರು ಎಂದು ಹೇಳಿದ್ದೇನೆ ಎಂದು ನುಡಿಯುತ್ತಾರೆ.

8. ದಾಳಿಗೆ ಹೋಗುವ ಮುಂಚೆ ವಲಯ ಅರಣ್ಯಾಧಿಕಾರಿಯ ಅನುಮತಿ ಪಡೆದಿರುತ್ತೇವೆ. ಅವರ ಅನುಮತಿ ಪಡೆದಾಗ ಅವರು ವಲಯ ಅರಣ್ಯಾ ಕಚೇರಿಯಲ್ಲಿದ್ದರು. ಮಾಹಿತಿ ಬಾಳೆಗುಳಿ ಉಪವಲಯ ಅರಣ್ಯಾಧಿಕಾರಿಗೆ ಬಂತು ಎಂದು ಹೇಳಿದ್ದೇವೆ. ಉಪವಲಯ ಅರಣ್ಯಾಧಿಕಾರಿ ಬಾಳೆಗುಳಿಯವರಿಗೆ ಮಧ್ಯಾಹ್ನ 1 ಘಂಟೆಗೆ ಮಾಹಿತಿ ಬಂತು ಎಂದು ತಿಳಿಸಿದ್ದರು. ನಾನು ಹಾಗೂ ಚಾಸಾ-6 ರವರು ಅಂಕೋಲಾದ ವಲಯ ಅರಣ್ಯಾ ಕಚೇರಿಯಿಂದ ಮಾಹಿತಿ ಬಂದತ ನಂತರ ಹೊರಟೆವು. ಚಾಸಾ-1, 2, 3 ಹಾಗೂ 7 ರವರು ಬಾಳೆಗುಳಿ ಕ್ರಾಸ್‌ನಲ್ಲಿದ್ದರು. ಚಾಸಾ-1 ರವರು ನನಗೆ ಬಾಳೆಗುಳಿ ಕ್ರಾಸ್ ನಿಂದ ದೂರವಾಣಿ ಕರೆ ಮಾಡಿರಬಹುದು. ಚಾಸಾ-1 ರವರ ವಲಯ ಅರಣ್ಯಾಧಿಕಾರಿ ಕಚೇರಿ ಅಂಕೋಲಾ ಇರುತ್ತದೆ. ಅವರು ಬಾಳೆಗುಳಿ ಶಾಖೆಯಲ್ಲಿ ಕರ್ತವ್ಯ ಮಾಡುವ ಸ್ಥಳ. ಶಿರೂರು ಶಾಖೆಯ ಪ್ರದೇಶ ಅಂಕೋಲಾದಿಂದ 5 ಕಿ.ಮಿ. ದೂರದಲ್ಲಿದೆ. ಪ್ರತಿ ಶಾಖೆಗಳಲ್ಲಿ ನಮಗೆ ವಸತಿಗೃಹ ಇರುತ್ತದೆ. ಅಲ್ಲಿ 24 ಘಂಟೆಯು ಕೂಡ ಇರಬೇಕಾಗುತ್ತದೆ. ಅಲ್ಲಿ ಕರ್ತವ್ಯದಲ್ಲಿರುವ ಬಗ್ಗೆ ಡೈರಿ ನಮೂದು

ಇರುತ್ತದೆ. ಆ ಡೈರಿಯಲ್ಲಿ ಶಾಖೆಯನ್ನು ಬಿಟ್ಟು ಬೇರೆ ಕಡೆ ಹೋಗಬೇಕಾದರೆ ನಮೂದು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಬೇರೆ ವಿಚಾರದಲ್ಲಿ ಹೋದಾಗ ರಜೆ ಹಾಕಿ ಹೋಗಬೇಕು ಹಾಗೂ ಕರ್ತವ್ಯದಲ್ಲಿ ಬೇರೆ ಕಡೆ ಹೋದಾಗ ನಮೂದಿಸಬೇಕು ಎಂದು ನುಡಿಯುತ್ತಾರೆ. ಆ ಡೈರಿ ನಾವು ಎಲ್ಲಿ ಕರ್ತವ್ಯ ಮಾಡಿದ್ದೇವೆ ಎನ್ನುವುದಕ್ಕೆ ದೃಡಿಕರಿಸುವ ದಾಖಲೆ ಎಂದರೆ ಸರಿ. ಆ ಡೈರಿಯ ಒಂದು ಪ್ರತಿ ನಮ್ಮಲ್ಲಿ ಇಟ್ಟುಕೊಂಡು, ಇನ್ನೊಂದು ಪ್ರತಿ ವಲಯ ಅರಣ್ಯಾಧಿಕಾರಿ ಹಾಗೂ ಮತ್ತೊಂದು ಪ್ರತಿ ಎ.ಸಿ.ಎಫ್.ಗೆ 7 ದಿನಕ್ಕೊಮ್ಮೆ ನೀಡುತ್ತೇವೆ.

9. ನ್ಯಾಯಾಲಯದಲ್ಲಿ ನಾನು ಕೋಟೆಬಾವಿ ಶಾಖೆಯಲ್ಲಿ ಕರ್ತವ್ಯದಲ್ಲಿದ್ದ ಬಗ್ಗೆ ಡೈರಿಯನ್ನು ತೋರಿಸಿಲ್ಲ. ದಿನಾಂಕ 14-08-2020 ರಂದು ನವಗದ್ದೆ ದಾಳಿಯಲ್ಲಿ ನಾನು ಭಾಗವಹಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತನಿಖಾಧಿಕಾರಿ ಚಾಸಾ-11 ರವರು ಆಗಿರುತ್ತಾರೆ. ಅವರು ಅಂಕೋಲಾದ ಉಪವಿಭಾಗದಲ್ಲಿ ಸಹಾಯಕ ಅರಣ್ಯಾ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯ ಆ ಸಮಯದಲ್ಲಿ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ಮೇಲಾಧಿಕಾರಿ ಎಂದರೆ ಸರಿ. ಮೇಲಾಧಿಕಾರಿಗಳ ಆದೇಶವನ್ನು ನಾನು ಪಾಲಿಸಬೇಕು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಹೇಳಿಕೆ ಹಾಗೂ ತನಿಖಾಧಿಕಾರಿಗೆ ನೀಡಿದ್ದೇನೆ ಎಂದು ಹೇಳಲಾದ ಹೇಳಿಕೆ ಸುಳ್ಳು ಹೇಳಿಕೆಗಳು ಎಂದರೆ ಸರಿಯಲ್ಲ.

10. ನಾನು 1995-2002 ರ ತನಕ ನವಗದ್ದೆಯಲ್ಲಿ ಕರ್ತವ್ಯ ಮಾಡಿದ್ದೆ. ಆ ರೀತಿ ಕರ್ತವ್ಯ ಮಾಡಿದರುವುದರಿಂದ ನವಗದ್ದೆಯ ಚಿತ್ರಣ ನನಗಿದೆ. ನನ್ನ 7 ವರ್ಷಗಳ ಕಾಲ ಸೇವಾ ಅನುಭವದಿಂದ

ನನ್ನ ಮೇಲಾಧಿಕಾರಿಗಳು ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಕೋಲಾ ಕಚೇರಿಯಿಂದ ಹೊರಟಿರುವುದು ಎಂದು ಹೇಳಿರುವ ಹೇಳಿಕೆ ಸರಿ ಇದೆ. ವಲಯ ಅರಣ್ಯಾಧಿಕಾರಿ ಕಚೇರಿಗೆ ಚಾಸಾ–1, 6, 7 ಮತ್ತು ಪಂಚರಾದ 2 ಮತ್ತು 3 ರವರು ಬಂದಿಲ್ಲ. ಆದರೆ ಅವರು ಬಾಳೆಗುಳಿ ಕ್ರಾಸಿಗೆ ಬಂದಿದ್ದರು. ಬಾಳೆಗುಳಿ ಕ್ರಾಸ್ ನಮ್ಮ ವಲಯ ಅರಣ್ಯಾಧಿಕಾರಿ ಕಚೇರಿಯಿಂದ 4 ಕಿ.ಮಿ. ದೂರದಲ್ಲಿದೆ. 50 ಮೀಟರ್ ಹಿಂದೆ ಅಂದರೆ ಕಾಲುದಾರಿ ರಸ್ತೆಯಿಂದ ಪ್ರಾರಂಭವಾಗುವ ಅಲ್ಲಿಂದ 50 ಮೀಟರ್ ಹಿಂದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ. ನಾನು ಹೇಳಿದಂತ 1 ನೇ ಆರೋಪಿಯ ಮನೆಯು ಮುಖ್ಯರಸ್ತೆಯಿಂದ 250 ಮೀಟರ್ ದೂರದಲ್ಲಿದೆ. ಆರೋಪಿಯ ಮನೆಯನ್ನು ಶೋಧಿಸಲು ನಮಗೆ ಶೋಧನಾಸಮುಚಿತ ಬೇಕಿಲ್ಲ. ಆರೋಪಿಯ ಮನೆ ಬಾಗಿಲು ತೆರೆದಿತ್ತು. ಆರೋಪಿಯ ಮನೆಯ ಒಳಗೆ ಪ್ರವೇಶಿಸುವ ಮುನ್ನ ಅಲ್ಲಿ ಯಾರು ಇರದೆ ಇದ್ದುದರಿಂದ ಶೋಧನೆ ಮಾಡುತ್ತೇವೆ ಎಂದು ಯಾರಿಗೂ ಹೇಳಿಲ್ಲ. ಆರೋಪಿಯ ಮನೆಯನ್ನು ಸುಮಾರು 5 ನಿಮಿಷ ಶೋಧನೆ ಮಾಡಿದ್ದೆವು.

11. ನನ್ನ ಹೇಳಿಕೆಯಲ್ಲಿ ಇಬ್ಬರು ಆರೋಪಿಗಳನ್ನು ವಲಯ ಅರಣ್ಯಾ ಕಚೇರಿಗೆ ಕರೆದುಕೊಂಡು ಬಂದ ನಂತರ 1 ನೇ ಆರೋಪಿಯನ್ನು ಮತ್ತೆ ಹಿಡಿಯಲು ಹೋದೆವು ಎಂದು ಹೇಳಿಲ್ಲ. ಕಡತದಲ್ಲಿರುವ ನನ್ನ ಹೇಳಿಕೆ ಎಂದು ಹೇಳುವ ಹೇಳಿಕೆ ಘಟನೆಯ 6 ದಿನದ ನಂತರ ನೀಡಿದ ಹೇಳಿಕೆ ಎಂಬುದಾಗಿ ನಮೂದು ಇದೆ ಎಂದರೆ ಸರಿ. ಮಾಂಸವನ್ನು ನದಿಯಲ್ಲಿ ತೊಳೆದಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿಯ ಮನೆಯಿಂದ 1 ನೇ ಆರೋಪಿಯು ಸಿಕ್ಕಿದ ಎಂದು ಹೇಳುವ ಸ್ಥಳ 80

ಮೀಟರ್ ದೂರದಲ್ಲಿ ಇರುತ್ತದೆ. ಸಾಕ್ಷಿ ಹಳ್ಳದ ಬಂಡೆಯ ಮೇಲೆ ಮಲಗಿಕೊಂಡಿದ್ದರು ಎಂದು ನುಡಿಯುತ್ತಾರೆ. ಆ ಬಂಡೆ ನೆಲದಿಂದ ಬೆಳೆದ ಬಂಡೆಯಾಗಿರುತ್ತದೆ. ಹಳ್ಳದಲ್ಲಿ ನೀರು ಸುಮಾರು ನನ್ನ ಸೊಂಟದ ತನಕ ಎತ್ತರ ಹರಿಯುತ್ತಿತ್ತು. ನಾವು ಆತನನ್ನು ಹಿಡಿಯುವ ತನಕ ಆತನಿಗೆ ಗೊತ್ತಾಗಿರಲಿಲ್ಲ. ಆ ಹಳ್ಳದ ನೀರು ಪಶ್ಚಿಮದ ಕಡೆಗೆ ಹರಿಯುತ್ತಿತ್ತು. ಆ ನೀರು ರಭಸವಾಗಿ ಹರಿಯುತ್ತಿತ್ತು. ಬೆಟ್ಟದ ಹಳ್ಳದ ನೀರು ಸೊಂಟದ ತನಕ ಇದ್ದಾಗ ವೇಗವಾಗಿ ಹರಿಯುತ್ತದೆ ಎಂದರೆ ಸರಿ. ಆ ಬಂಡೆಯ ಬಳಿ ಹೋಗಲು ನೀರನ್ನು ಸ್ಪರ್ಶ ಮಾಡದೆ ಕಲ್ಲುಗಳ ಮೇಲೆ ಕಾಲಿಟ್ಟು ಹೋಗುವ ರೀತಿ ಕಲ್ಲು ಇದ್ದವು ಎಂದು ಸ್ವತಹ ಹೇಳುತ್ತಾರೆ. ಆ ಕಲ್ಲುಗಳು ಕಾಲು ಇಟ್ಟು ಹೋಗುವ ಅಳತೆಯ ಕಲ್ಲುಗಳು ಇದ್ದು, ಸುತ್ತಲು ನೀರು ಹರಿಯುತ್ತಿತ್ತು.

12. ಬಿ.ಡಿ. ಗೌಡರ ತೋಟಕ್ಕೂ 1 ನೇ ಆರೋಪಿಯ ತೋಟಕ್ಕೂ 105 ಮೀಟರ್ ದೂರ ಇತ್ತು. 1 ನೇ ಆರೋಪಿಯ ತೋಟದ ಪೂರ್ವ ದಿಕ್ಕಿಗೆ ಬಿ.ಡಿ. ಗೌಡರ ತೋಟ ಇದೆ. ಈ 2 ತೋಟಗಳ ನಡುವೆ ಯಾವುದೇ ತೋಟ, ಕಾಲುವೆ ಅಥವಾ ಹಳ್ಳ ಇರುವುದಿಲ್ಲ. ಆದರೆ ಅರಣ್ಯ ಜಮೀನು ಸರ್ವೆ ನಂ. 26 ಇದೆ. 1 ನೇ ಆರೋಪಿಯ ಹಾಗೂ ಬಿ.ಡಿ. ಗೌಡರ ಜಮೀನಿನ ಸರ್ವೆ ನಂಬರ್ ನಾನು ತಿಳಿದುಕೊಂಡಿಲ್ಲ. ಬಿ.ಡಿ.ಗೌಡರ ಮನೆ ಅವರ ಆ ತೋಟದ ಉತ್ತರಕ್ಕೆ ಇದೆ. ಬಿ.ಡಿ. ಗೌಡರು ಸಾಮಾಜೀಕ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಾಗಿದ್ದರು ಎಂದು ಚಾಸಾ–1 ರವರು ನನಗೆ ಹೇಳಿಲ್ಲ. ಯಾವುದೇ ಜಮೀನಿನಲ್ಲಿ ಅನಧಿಕೃತ ಅರಣ್ಯ ಸ್ವತ್ತು ಅಥವಾ ಅರಣ್ಯ ಗುನ್ನೆಗೆ ಬಳಸಿದ ವಸ್ತುಗಳು ಸಿಕ್ಕಾಗ ಆ ಜಮೀನಿನ ಮಾಲೀಕರ ವಿರುದ್ಧ ಎಲ್ಲ ಸಂದರ್ಭದಲ್ಲಿ ಪ್ರಕರಣ ದಾಖಲಿಸುವುದಿಲ್ಲ. ನಾವು ಹೋದೆವು

ಎಂದು ಹೇಳುವ ಸಮಯದಲ್ಲಿ ಬಿ.ಡಿ.ಗೌಡರಲ್ಲಿ ಅವರ ಜಮೀನಿನಲ್ಲಿ ಬಂಧೂಕು ಸಿಕ್ಕಿರುವ ಬಗ್ಗೆ ವಿಚಾರಣೆ ಮಾಡಿಲ್ಲ.

13. ಬಂಧೂಕು ಸಿಕ್ಕಿತ್ತು ಎಂದು ಹೇಳುವ ಸ್ಥಳದ ಚಕ್ ಬಂದಿಯನ್ನು ಪುರವಣಿ ಪಂಚನಾಮೆಯಲ್ಲಿ ಬರೆದಿರುತ್ತೇವೆ. 1 ನೇ ಆರೋಪಿ ಸಿಕ್ಕ ಅರ್ಧ ಘಂಟೆಯಲ್ಲಿ ಬಂಧೂಕು ಸಿಕ್ಕಿದೆ. ಅರ್ಧ ಘಂಟೆಯಲ್ಲಿ ಬಂಧೂಕು ಸಿಕ್ಕಿದೆ ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ನನ್ನ ಪ್ರಕಾರ ಘಟನಾ ಸ್ಥಳ ಎಂದರೆ ಮಾಂಸ ಸಿಕ್ಕಿದ ಸ್ಥಳ. 1 ನೇ ಆರೋಪಿಯ ಮನೆಯ ಪೂರ್ವ ದಿಕ್ಕಿನಲ್ಲಿ ಕಾಲು, ಚರ್ಮ ಮುಂತಾದವು ಸಿಕ್ಕಿರುತ್ತದೆ. ಕರುಳನ್ನು ಹುಡುಕಲು 5-10 ನಿಮಿಷ ಪ್ರಯತ್ನಿಸಿದ್ದೆವು. ಅದನ್ನು ಹಳ್ಳದಲ್ಲಿ ನೀರು ವೇಗವಾಗಿ ಹರಿಯುವ ಸ್ಥಳದ ತನಕ ಹುಡುಕಿದೆವು. ನಿಧಾನವಾಗಿ ಹರಿಯುವ ಸ್ಥಳದ ತನಕ ಹೋಗಿಲ್ಲ. ಕಾಲು, ಚರ್ಮ ರಕ್ತಸಿಕ್ತವಾಗಿತ್ತು. ತಲೆ ರಕ್ತಸಿಕ್ತವಾಗಿತ್ತು ಆದರೆ ಬಲಿತ ಭ್ರೂಣ ಹಾಗೂ 4 ಕಾಲುಗಳು ರಕ್ತಸಿಕ್ತವಾಗಿರಲಿಲ್ಲ ಹಾಗೂ ಹಳ್ಳದಲ್ಲಿ ಕಲ್ಲು ಅವುಗಳ ಮೇಲೆ ಇಟ್ಟು ನೀರಿನಲ್ಲಿ ಇಡಲಾಗಿತ್ತು ಎಂದು ಪುನಹ ನುಡಿಯುತ್ತಾರೆ. 1 ನೇ ಆರೋಪಿ ಆ ಕಲ್ಲುಗಳನ್ನು ತೆಗೆದು ಬಲಿತ ಭ್ರೂಣ ಹಾಗೂ 4 ಕಾಲುಗಳನ್ನು ತೋರಿಸಿದರು. ಭ್ರೂಣ ಬಹಳಷ್ಟು ಮೃದುವಾಗಿರುತ್ತದೆ ಎಂದರೆ ಸರಿ. ಬೆಳಿಗ್ಗೆ 5 ಘಂಟೆಗೆ ಅವುಗಳನ್ನು ಇಟ್ಟು ದೊಡ್ಡ ಕಲ್ಲು ಇಟ್ಟಿದ್ದೇನೆ ಎಂದು ಆತ ಹೇಳಿದ್ದಾನೆ. ಆ ಭ್ರೂಣ ಒಡೆದು ಆಕೃತಿ ಬದಲಾವಣೆ ಆಗಿಲ್ಲ ಹಾಗೂ ಆ ಭ್ರೂಣಕ್ಕೆ ಕವಚವಾಗಿ ಗರ್ಭಕೋಶ ಇತ್ತು. ಗರ್ಭಕೋಶ, ಭ್ರೂಣ ಹಾಗೂ ಕಾಲು ಹಾಗೂ ಚರ್ಮವನ್ನು ವಶಪಡಿಸಿಕೊಳ್ಳಲು ತೊಂದರೆ ಇರಲಿಲ್ಲ. ಗರ್ಭಕೋಶವನ್ನು ವಶಪಡಿಸಿಕೊಂಡ ಬಗ್ಗೆ ಹೇಳಿಕೆ ನೀಡಿಲ್ಲ. ಸಹಾಯಕ ಪಶುವೈದ್ಯಾಧಿಕಾರಿ ಗರ್ಭಕೋಶವನ್ನು ತೆಗೆದು

ತೋರಿಸಿ, ಸಂಪೂರ್ಣ ಬಲಿತ ಭ್ರೂಣವನ್ನು ತೆಗೆದರು. ಆ ಗರ್ಭಕೋಶವನ್ನು ಅಲ್ಲೆ ಬಿಸಾಡಿ ಬಂದಿರುತ್ತೇವೆ. ನನ್ನ ಜೊತೆ ಇದ್ದವರು ಗರ್ಭಕೋಶದ ಜೊತೆಗೆ ಇದ್ದ ಭ್ರೂಣವನ್ನು ನೋಡಿರುತ್ತಾರೆ.

14. ಸದ್ರಿ ಭ್ರೂಣ, ಕಾಲುಗಳು 1 ನೇ ಆರೋಪಿಯನ್ನು ಹಿಡಿದ ಹಳ್ಳದಲ್ಲಿ ಹಾಕಿರಲಿಲ್ಲ, ಆದರೆ ನಾಲದಲ್ಲಿ ಅವುಗಳನ್ನು ಹಾಕಲಾಗಿತ್ತು. ಆ ನಾಲ 15 ಅಡಿ ಅಗಲ ಇತ್ತು. ಆ ಹಳ್ಳ 25-30 ಅಡಿ ಅಗಲ ಇತ್ತು. ಹಳ್ಳ ಉತ್ತರದಿಂದ ಪಶ್ಚಿಮಕ್ಕೆ ಹರಿಯುತ್ತಿತ್ತು. ನಾಲ ಉತ್ತರದಿಂದ ಪೂರ್ವಕ್ಕೆ ಹರಿಯುತ್ತಿತ್ತು. ಗಣ್ಯಾ ಕೆಮಿಕಲ್ಸ್ ಹಾಗೂ ಕಂಚಿನ ಬಾಗಿಲು ಎತ್ತರದ ಪ್ರದೇಶದಲ್ಲಿದ್ದು, ನವಗದ್ದೆ ಅರಣ್ಯ ಪ್ರದೇಶ ತಗ್ಗಿನಲ್ಲಿರುತ್ತದೆ ಎಂದರೆ ಸರಿ. ಕಂಚಿನಬಾಗಿಲು 1 ನೇ ಆರೋಪಿಯ ಮನೆಯ ಉತ್ತರಕ್ಕೆ ಬರುತ್ತದೆ. ಕಂಚಿನಬಾಗಿಲು ದೇವಸ್ಥಾನ ರಾಷ್ಟ್ರೀಯ ಹೆದ್ದಾರಿ 63 ಕ್ಕೆ ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ನರಸಿಂಹ ದೇವಸ್ಥಾನ ರಾಷ್ಟ್ರೀಯ ಹೆದ್ದಾರಿ 63 ಕ್ಕೆ ಹೊಂದಿಕೊಂಡಿದೆ ಎಂದರೆ ಸಾಕ್ಷಿ 25 ಮೀಟರ್ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ಕಂಚಿನಬಾಗಿಲು ದೇವಸ್ಥಾನಕ್ಕೆ ಜನರು ಗಂಟೆ ತೆಗೆದುಕೊಂಡು ಹೋಗಿ ಹರಕೆ ತೀರಿಸುತ್ತಾರೆ ಎಂದರೆ ಸರಿ. ಆ ರಸ್ತೆಯಲ್ಲಿ ಹೋಗುವ ಹಾಗೂ ಬರುವ ವಾಹನ ಸವಾರರು ಕಂಚಿನಬಾಗಿಲು ದೇವಸ್ಥಾನಕ್ಕೆ ನಮಸ್ಕರಿಸಲು ನಿಲ್ಲಿಸುತ್ತಾರೆ ಎಂದರೆ ಸರಿ.

15. ಕಡವೆಗೆ ಗುಂಡಿಟ್ಟ ಎಂದು ಹೇಳುವ ಸ್ಥಳದಿಂದ ಕಡವೆ ಸತ್ತು ಬಿದ್ದಿತ್ತು ಎಂದು ಹೇಳುವ ಸ್ಥಳದ ತನಕ ರಕ್ತದ ಕಲೆಗಳು ಬಿದ್ದದ್ದನ್ನು ನಾನು ನೋಡಿಲ್ಲ. ಪಂಚರ ಸಹಿ ಇರುವ ಲೆಬಲನ್ನು ವಶಪಡಿಸಿಕೊಂಡ ವಸ್ತುಗಳಿಗೆ ಅಂಟಿಸುವುದಿಲ್ಲ. ವಶಪಡಿಸಿಕೊಂಡ ವಸ್ತುಗಳ ಮೇಲೆ ಪಂಚರ ಹಾಗೂ ದಾಳಿ ಮಾಡಿದವರ ಸಹಿಗಳನ್ನು ಸಾಮಾನ್ಯವಾಗಿ ಪಡೆಯುತ್ತೇವೆ. ಈ ಪ್ರಕರಣದ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡು

ಕವರ್ ನಲ್ಲಿ ಹಾಕಿ ಮೊಹರು ಸ್ಥಳದಲ್ಲಿ ಹಾಕಲಾಗಿದೆ. ಪಂಚರ ಸಹಿಗಳನ್ನು ಪಡೆದಿಲ್ಲ. ನಮ್ಮ ಸಹಿಗಳನ್ನು ಕೂಡ ಅವುಗಳ ಮೇಲೆ ಪಡೆದಿಲ್ಲ.

16. ಚೀಲವನ್ನು ವಶಪಡಿಸಿಕೊಂಡಾಗ ಅದನ್ನು ಕವರ್ ನಲ್ಲಿ ಹಾಕಿ ಮೊಹರು ಮಾಡಿಲ್ಲ ಹಾಗೂ ಪಂಚರ ಹಾಗೂ ನಮ್ಮ ಸಹಿಗಳನ್ನು ಕೂಡ ಆ ಬಗ್ಗೆ ಪಡೆದಿಲ್ಲ. ಆ ಚೀಲವನ್ನು ವಲಯ ಕಚೇರಿಗೆ ತಂದು ವಲಯ ಅರಣ್ಯಾಧಿಕಾರಿಗೆ ಹಸ್ತಾಂತರಿಸಿರುತ್ತೇವೆ. ಆ ಇಬ್ಬರು ಆರೋಪಿಗಳನ್ನು ಕೂಡ ವಲಯ ಅರಣ್ಯಾಧಿಕಾರಿ ನನ್ನ ಹಾಗೂ ಚಾಸಾ-1 ರಿಂದ 3 ಹಾಗೂ ಚಾಸಾ-6 ರಿಂದ 7 ರವರ ಸಮಕ್ಷಮ ವಶಕ್ಕೆ ಪಡೆದರು. ಬೈಕು, ಮಾಂಸ, 2 ಮೊಬೈಲ್ ಫೋನ್‌ಗಳನ್ನು ಅವರಿಗೆ ಕೊಟ್ಟಿದ್ದೇವೆ. ಅವರನ್ನು ಹಾಗೂ ಆ ಮುದ್ದೆ ಮಾಲುಗಳನ್ನು ವಲಯ ಅರಣ್ಯಾಧಿಕಾರಿಗೆ ವಶಕ್ಕೆ ಕೊಟ್ಟಾಗ ಪಂಚನಾಮೆಯಲ್ಲಿ ಅದನ್ನು ಹೇಳಲಾಗಿದೆ. ಅವರಿಗೆ ಆ ರೀತಿ ನೀಡುವಲ್ಲಿ ಸುಮಾರು 1 ತಾಸು ತಗುಲಿರುತ್ತದೆ.

17. ವಲಯ ಅರಣ್ಯಾಧಿಕಾರಿ ನಮ್ಮ ಜೊತೆ 1 ನೇ ಆರೋಪಿಯನ್ನು ಬಂಧಿಸಲು ಬಂದಿರುವುದಿಲ್ಲ. ನಾವು ಪಶುವೈಧ್ಯಾಧಿಕಾರಿಯನ್ನು ಸಂಜೆ 4.15 ಕ್ಕೆ ಕರೆಸಿರುತ್ತೇವೆ. ಅವರು ಚರ್ಮ, ತಲೆ ಮತ್ತು ಮಾಂಸದ ಮಾದರಿಯನ್ನು ತೆಗೆದರು. ಅವರು ಭ್ರೂಣದ ಮಾದರಿ ತೆಗೆಯಲು ತೊಂದರೆ ಇತ್ತು ಎಂದು ಹೇಳಿಲ್ಲ. ಭ್ರೂಣದ ಮಾದರಿ ತೆಗೆಯಲು ಕೂಡ ಅವರಿಗೆ ಹೇಳಿರುತ್ತಾರೆ. ಆದರೆ ಮಾದರಿ ಅವರು ತೆಗೆಯದೆ ಕಾರಣ ಹೇಳಿಲ್ಲ. ಕಾಲಿನ ಮಾದರಿ ತೆಗೆದಿಲ್ಲ. ಪಂಚನಾಮೆಯಲ್ಲಿ ತಲೆಯ ಯಾವ ಭಾಗವನ್ನು ಮಾದರಿಯಾಗಿ ತೆಗೆಯಲಾಯಿತು ಎಂದು ಬರೆದಿಲ್ಲ. ತಲೆಯ 2X2.5 ಇಂಚು ಗಾತ್ರದ ತುಂಡು ಮಾದರಿಗೆ ತೆಗೆದಿದ್ದಾರೆ. ಆ ಮಾದರಿಯ ಅಳತೆ ಪಂಚನಾಮೆಯಲ್ಲಿ ಹೇಳಿಲ್ಲ. ನನಗೆ ಹೇಳಿಕೆ

ಕೊಡುವ ಮುಂಚೆ ಆ ಮಾದರಿ ವಸ್ತುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಕ್ರಮ ಜರುಗಿಸಿರುವುದನ್ನು ತೋರಿಸಿಲ್ಲ. ನಂತರ ಪಶುವೈಧ್ಯಾಧಿಕಾರಿಯನ್ನು ಕರೆಸಿ ನನ್ನ ಮುಂದೆ ಮಾದರಿ ತೆಗೆದಿಲ್ಲ. ಅಂಕೋಲಾ ಸಹಾಯಕ ಅರಣ್ಯಾ ಸಂರಕ್ಷಣಾಧಿಕಾರಿಯವರ ಮೊಹರನ್ನು ಆ ಮಾದರಿಗಳಿಗೆ ಹಚ್ಚಲಾಯಿತು. ಅಂಕೋಲಾ ವಲಯಅರಣ್ಯಾಧಿಕಾರಿಯವರ ಮೊಹರುಗಳನ್ನು ಆ ಮಾದರಿಗಳಿಗೆ ನನ್ನ ಸಮಕ್ಷಮ ಹಚ್ಚಿದ್ದಾರೆ. ಸದ್ರಿ ಮಾದರಿಗಳ ಮೇಲೆ ಅವರಿಬ್ಬರ ಮೊಹರುಗಳನ್ನು ಹೊರತುಪಡಿಸಿ ಬೇರೆ ಯಾರದ್ದು ಮೊಹರುಗಳನ್ನು ಹಚ್ಚಿಲ್ಲ. ಮಾದರಿಗಳನ್ನು ಪ್ರಯೋಗಾಲಯಕ್ಕೆ ಯಾರು ತೆಗೆದುಕೊಂಡು ಹೋದರು ಎಂದು ನನಗೆ ಹೇಳಿಲ್ಲ.

18. ರಾಷ್ಟ್ರೀಯ ಹೆದ್ದಾರಿಯಿಂದ ಉತ್ತರಕ್ಕೆ ಎಡಗಡೆಗೆ ಕಾಲುದಾರಿಯಲ್ಲಿ 50 ಮೀಟರ್ ದೂರದಲ್ಲಿ ಹಿಡಿದೆವು. ಅವರನ್ನು ಹಿಡಿದ ಬಲಗಡೆಗೆ ಬಸ್ಸ್ ನಿಲ್ದಾಣ ಇರುವುದಿಲ್ಲ. ಚಾಸಾ-3 ರ ತಮ್ಮನ ಅಂಗಡಿ ಅಲ್ಲಿ ಎಲ್ಲಿ ಬರುತ್ತದೆ ಎಂದು ನಾನು ನೋಡಿಲ್ಲ. ಚಾಸಾ-3 ರವರ ಮನೆಯವರನ್ನು ಸಾಕ್ಷಿಯನ್ನಾಗಿ ಮಾಡಲು ಪ್ರಯತ್ನಿಸಿಲ್ಲ. ಬಿ.ಡಿ. ಗೌಡರನ್ನು ಕೂಡ ಸಾಕ್ಷಿಯಾಗಿ ಮಾಡಲು ಕರೆಸಿಲ್ಲ. ಹಗಲು ಹೊತ್ತಲ್ಲಿ ಸ್ವತಂತ್ರ ಸಾಕ್ಷಿಯನ್ನು ಕರೆಸುವ ಸಂದರ್ಭ ಇರುತ್ತದೆ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲು** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.